ಮೊನ್ನೆ ಮೊನ್ನೆ ಒಂದು ಸಾಹಿತ್ಯಗೋಷ್ಠಿಗೆ ಭಾಷಣ ಮಾಡೋದಿಕ್ಕೆ ಹೋಗೋದಿತ್ತು. ಭಾಷಣ ಎಲ್ಲಾ ಅದಾಗಲೇ ರೆಡಿ ಮಾಡಿಟ್ಟುಕೊಂಡಿದ್ದೆನಷ್ಟೆ. ಅಷ್ಟರಲ್ಲಿ ಗಂಟಲು ಕಿರಿಕಿರಿ ಎಬ್ಬಿಸಿ ಕಿರಿಕ್ ಕೊಡತೊಡಗಿತ್ತು. ಶುಂಠಿ, ಬೆಳ್ಳುಳ್ಳಿ, ಕರಿ ಮೆಣಸು ಹಾಕಿ ಬಿಸಿ ಬಿಸಿ ಹಾಲು ಕಷಾಯ ಮಾಡಿ ಗಂಟಲಿಗೆ ಇಳಿಸಿದರೂ ಪ್ರಯೋಜನವೇ ಇಲ್ಲ. ನಾನು ಸರಾಗವಾಗಿ ಮಾತನಾಡಲು ಬಿಡೆ ಎಂಬಂತೆ ಗಂಟಲಾಳದಿಂದ ಗುರಾಯಿಸುವ ಕೆಮ್ಮು. ಗಂಟಲು ಸರಿಯಿಲ್ಲವಲ್ಲಾ ಎನ್ನುವ ದೊಡ್ಡ ಕೊರತೆಯ ನಡುವೆಯೂ ಸದ್ಯಕ್ಕೆ ಜ್ವರ ಬಂದಿಲ್ಲವಲ್ಲ ಅನ್ನೋ ಸಣ್ಣ ಸಮಾಧಾನ ಹೊತ್ತು ಗೋಷ್ಠಿಗೆ ತೆರಳಿದ್ದೆ. ಗೋಷ್ಠಿಯ ನಡುವೆ ಪಕ್ಕ ವಾದ್ಯ ನುಡಿಸುತ್ತಿದ್ದ ನನ್ನ ಕೆಮ್ಮುವಿನ ಉಪಟಳ ತಾಳಲಾರದೇ ಪಕ್ಕ ಕುಳಿತಿದ್ದವರೊಬ್ಬರು, ನೀವು ಒಮ್ಮೆ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಈಗ ಎಲ್ಲಾ ಕಡೆಗಳಲ್ಲೂ ಡೆಂಗಿ ಜ್ವರ. ನಿಮಗೆ ಬಂದಿರಲಿಕ್ಕಿಲ್ಲ, ಆದರೂ ಯಾವುದಕ್ಕೂ ಟೆಸ್ಟು ಮಾಡಿಸಿಕೊಳ್ಳೋದೆ ಉತ್ತಮ ಅಂತ ಮೆಲ್ಲಗೆ ಉಸುರಿದಾಗ ನನ್ನ ಜಂಘಾಬಲವೇ ಉಡುಗಿಹೋಗಿತ್ತು. ಈ ನಿಲ್ಲಲಾರದ ಕೆಮ್ಮನ್ನು ಹೊತ್ತುಕೊಂಡು, ರಕ್ತ ಪರೀಕ್ಷೆಯ ಸೂಜಿಯನ್ನು ನೆನೆದುಕೊಂಡು ನೇರ ವೈದ್ಯರಲ್ಲಿಗೆ ಹೋದರೆ, ತಾಳ್ಮೆಯಿಂದ ಪರೀಕ್ಷಿಸಿದ ವೈದ್ಯರು ಅಷ್ಟೇ ತಾಳ್ಮೆಯಿಂದ ನಿನಗೆ ಡೆಂಗಿ ಬಂದಿದೆಯಮ್ಮ, ಭಯಪಡಬೇಕಾಗಿಲ್ಲ. ಟಾನಿಕ್, ಮಾತ್ರೆ ಕುಡಿಯಿರಿ ಅಂತ ಭರವಸೆ ತುಂಬಿ ಕಳುಹಿಸಿಕೊಟ್ಟರು. ಡಾಕ್ಟ್ರ ಮಾತು ಕೇಳಿ ಸಮಾಧಾನದಿಂದಿರಬೇಕೋ? ಅಥವಾ ಡೆಂಗಿಯಿಂದ ನರಳುತ್ತಿರುವವರನ್ನು ನೆನೆದು ಸಂಕಟ ಹೆಚ್ಚಿಸಿಕೊಳ್ಳಬೇಕೋ ಗೊತ್ತಾಗದೆ, ವೈದ್ಯರು ಬೆಳಗ್ಗೆಗೆ ಅರ್ಧ, ರಾತ್ರೆಗೆ ಅರ್ಧ ಅಂತ ಕೊಟ್ಟ ಅರ್ಧ ಮಾತ್ರೆ ನನ್ನನ್ನು ಬದುಕಿಸ ಬಲ್ಲದೇ ಎಂಬ ಜಿಜ್ಞಾಸೆಯಲ್ಲಿ ಅಪಾರ ಧೈರ್ಯ ತಂದುಕೊಂಡು ಮಾತ್ರೆ ನುಂಗಿ ನೀರು ಕುಡಿದು ಮಲಗಿಬಿಡುತ್ತೇನೆ.

ಹಾಗಾಗಿ ಈಗ ಸಣ್ಣಗೆ ಹಾಡುತ್ತಾ ಹಾರುತ್ತಾ ಬರುವ ಸೊಳ್ಳೆಯನ್ನು ಕಂಡಾಗಲೆಲ್ಲಾ ದಮ್ಮಯ್ಯ ಸೊಳ್ಳೆ... ನನ್ನ ರಕ್ತ ಹೀರಬೇಡವೋ... ಜ್ವರ ಬರಿಸಬೇಡವೋ... ದಮ್ಮಯ್ಯ ಅಂತ ಒಂದು ಸೂಕ್ಷ್ಮಾತಿ ಸೂಕ್ಷ್ಮ ಸೊಳ್ಳೆಯನ್ನು ಇವತ್ತು ನಾವು ದೈನೇಸಿ ಸ್ಥಿತಿಯಲ್ಲಿ ಬೇಡಿಕೊಳ್ಳುವಂತಾಗಿದೆ.


## ಸ್ಮಿತಾ ಅಮೃತರಾಜ್

ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಸೀಮೆಯ ಪಂಜದಲ್ಲಿ. ವಿದ್ಯಾಭ್ಯಾಸ ಬಿ.ಕಾಂ ವರೆಗೆ. ಕವಿತೆ ಮತ್ತು ಲಘು ಬರಹ ಬರೆಯುವುದರಲ್ಲಿ ಹೆಚ್ಚಿನ ಆಸಕ್ತಿ. ಪ್ರಕಟಿತ ಪುಸ್ತಕಗಳು ಮೂರು. 'ಕಾಲ ಕಾಯುವುದಿಲ್ಲ', 'ತುಟಿಯಂಚಲ್ಲಿ ಉಳಿದ ಕವಿತೆಗಳು'–ಕವನ ಸಂಕಲನಗಳಾದರೆ, 'ಅಂಗಳದಂಚಿನ ಕನವರಿಕೆಗಳು' ಗದ್ಯ ಬರಹಗಳ ಪುಸ್ತಕವಾಗಿದೆ. ಗೃಹಿಣಿ ಸ್ಮಿತಾ, ಪ್ರಸ್ತುತ ಕೊಡಗಿನ ಸಂಪಾಜೆ ಬಳಿಯ ಚೆಂಬುವಿನಲ್ಲಿ ನೆಲೆಸಿದ್ದಾರೆ.